ದಿಃ 24.07.2026

**ಸಿ.ಸಿ. 1/2021, ಪಿ.ಡಬ್ಲ್ಯೂ-9 ಹೆಸರುಃ ನಾಗರಾಜ**

**ದಿಃ24-07-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಡಿ.ಎಂ.ಬಿ. ವಕೀಲರಿಂದಃ**

ನನಗೆ ಚಾಸಾ. 1 ರವರಿಂದ ಮಾಹಿತಿ ಬಂದ ಕಾಲಕ್ಕೆ ನಾನು ಚನ್ನಗಿರಿ ರಸ್ತೆಯಲ್ಲಿ ಹೊಳಲ್ಕೆರೆ ಟೌನಿಂದ 2 ಕಿ.ಮೀ. ಅಂತರದಲ್ಲಿ ಇದ್ದೆನು. ನನಗೆ ಮಾಹಿತಿ ಬಂದ ನಂತರದಲ್ಲಿ ನಾನು ಚಾಸಾ. 7 ರವರನ್ನು ಕರೆದಿಲ್ಲ. ನಾನು ರಾತ್ರಿ ಸಮಯದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಡೈರಿಯನ್ನು ಇಟ್ಟಿರುವುದಿಲ್ಲ. ನನಗೆ ಸೇರಿದ ಇಲಾಖಾ ಜೀಪಿನ ಕುರಿತು ಡೈರಿ ಇರುತ್ತದೆ. ಅದರಲ್ಲಿ ನಮ್ಮ ಓಡಾಟದ ಕುರಿತು ನಮೂದು ಇರುತ್ತದೆ. ನನಗೆ ಸಂಬಂಧಿಸಿದ ಕಾರಿನ ಡೈರಿಯಲ್ಲಿ ಚಾಸಾ. 1 ರವರಿಂದ ಮಾಹಿತಿ ಬಂದ ಕುರಿತು ಉಲ್ಲೇಖ ಮಾಡಿಲ್ಲ.

2. ನಾನು ಮದ್ಯದ ಅಂಡಗಿಯ ಒಳಗೆ ಹೋಗಿದ್ದೆನು. ನಾನು ಅಲ್ಲಿ ಇದ್ದ ವ್ಯಕ್ತಿಗಳ ಬಳಿ ಯಾವ ರೀತಿಯಾಗಿ ಮದ್ಯದ ಅಂಗಡಿಯ ಒಳಗೆ ಹೋಗಿದ್ದರು ಎಂಬ ಬಗ್ಗೆ ವಿಚಾರಣೆ ಮಾಡಿದ್ದೆನು, ಎಷ್ಟು ಪ್ರಮಾಣದ ಮದ್ಯವನ್ನು ಸಾಗಾಣಿಕೆ ಮಾಡಿದ್ದಾರೆ ಎಂದು ವಿಚಾರಣೆ ಮಾಡಿಲ್ಲ.

3. 3 ನೇ ಆರೋಪಿತರು ನಾನು ಮತ್ತು 2 ನೇ ಆರೋಪಿ ಮನೆಯಲ್ಲಿದ್ದಾಗ, 1 ನೇ ಆರೋಪಿ ದೂರವಾಣಿ ಕರೆ ಮೂಲಕ ಮದ್ಯ ಬೇಕು, ಮದ್ಯದ ಅಂಗಡಿಯ ಬೀಗವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು, ಆಗ 3 ನೇ ಆರೋಪಿ ನಮ್ಮ ಮಾಲೀಕರ ಬಳಿ ಮಾತನಾಡಬೇಕು ಎಂದು ಹೇಳಿದಾಗ, 1 ನೇ ಆರೋಪಿ ತಾನು ಈಗಾಗಲೇ ನಿಮ್ಮ ಮಾಲೀಕರ ಬಳಿ ಮಾತನಾಡಿದ್ದು, ಬೀಗ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು, ಹಾಗಾಗಿ 2 ಮತ್ತು 3 ನೇ ಆರೋಪಿತರು ಬೀಗ ತೆಗೆದುಕೊಂಡು ಬಂದೆವು ಎಂದು ಚಾಸಾ.1 ರವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಚಾಸಾ. 1 ರವರಿಗೆ ಕಾರಿನ ಮೂಲಕ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿರುವುದಾಗಿ ತಿಳಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ. 1 ರವರು ಸ್ಥಳದಲ್ಲಿ ಓಡಾಡುವ ವಿಚಾರ ತಿಳಿದು ಕಾರನ್ನು ತೆಗೆದುಕೊಂಡು ಹೋಗಿರುತ್ತಾರೆಂದು, 3 ನೇ ಆರೋಪಿ ಚಾಸಾ. 1 ರವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ. 1 ರವರು ಮದ್ಯದ ಅಂಗಡಿಗೆ ಯಾವ ಕಂಪನಿಯ ಬೀಗವನ್ನು ಹಾಕಿದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಮಹಜರನ್ನು ಮತ್ತು ನಕ್ಷೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

ದಿ: 24.07.2026

4. ನಕ್ಷೆಯಲ್ಲಿ ಅಂಗಡಿ ಮಳಿಗೆಗಳ ಕುರಿತು ಮಾತ್ರ ಉಲ್ಲೇಖ ಇದೆ, ಬೀಗಗಳು ಮತ್ತು ಅಲ್ಲಿ ಇದ್ದ ವ್ಯಕ್ತಿಗಳ ಕುರಿತು ಉಲ್ಲೇಖ ಇಲ್ಲ. ನಿಪಿ.11 ಮತ್ತು 12 ರ ದಾಖಲಾತಿಗಳನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ವಿವಾದಿತ ದಿನದಂದು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರನ್ನು ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ,**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.